## ನಿಮ್ಮೊಡನೆ

# ದಾರಿ ಯಾವುದಯ್ಯ?

ವಯಸ್ಕರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಲು ಸರ್ಕಾರವೊಂದು ಪ್ರಯತ್ನ ನಡೆಸಿದರೆ ಅದನ್ನು ವಿರೋಧಿಸಲೇಬೇಕು. ಆದರೆ 12-16ರ ವಯಸ್ಸಿನ ಹುಡುಗರು ಕಾಮಪ್ರಚೋದಕ ವೆಬ್‌ಸೈಟ್‌ಗಳ ಗೀಳಿಗೆ ಒಳಗಾಗಿ ವಿಕೃತರಾಗುವುದನ್ನು ತಡೆಯಲು ಯಾವ ದಾರಿಗಳಿವೆ?

ಕಳೆದ ಶತಮಾನದ 90ರ ದಶಕದಲ್ಲಿ ಮುಕ್ತ ಆರ್ಥಿಕ ನೀತಿಗೆ ದೇಶ ತೆರೆದುಕೊಂಡಾಗಲೇ ಈ ನೀತಿಯ ಹಲವು 'ಪಾರ್ಶ್ವ ಪರಿಣಾಮ'ಗಳನ್ನು ಭಾರತೀಯರು ಮುಂದೆ ಎದುರಿಸಬೇಕಾಗುತ್ತದೆ ಎಂದು ಸಮಾಜ ವಿಜ್ಞಾನಿಗಳು ಎಚ್ಚರಿಸಿದ್ದರು. ಕಳೆದ ದಶಕದಲ್ಲಿ ಆರ್ಥಿಕ ಉದಾರೀಕರಣದಿಂದಾಗಿ ಉಂಟಾದ ಹಣದ ಹರಿವಿನಲ್ಲಿ, ಕೃಷಿ ಕ್ಷೇತ್ರದ ಸಂಕಷ್ಟಗಳನ್ನು ಹೊರತುಪಡಿಸಿ, ನಮ್ಮ ಇತರ ಸಾಮಾಜಿಕ ಕ್ಲೇಶಗಳು ಅಷ್ಟಾಗಿ ಗಮನ ಸೆಳೆಯಲಿಲ್ಲ. ಆದರೆ ಈ ಶತಮಾನದ ಎರಡನೆ ದಶಕದಲ್ಲಿ ಉಂಟಾದ ಡಿಜಿಟಲ್ ಕ್ರಾಂತಿಯ ಬೆನ್ನಲ್ಲೇ ಅದರ ದುಷ್ಪರಿಣಾಮಗಳೂ ಢಾಳಾಗಿ ಕಾಣಿಸಿಕೊಂಡಿವೆ. ಕಂಪ್ಯೂಟರ್ ಮತ್ತು ಸ್ಮಾರ್ಟ್‌ಫೋನ್‌ಗಳು ಪ್ರತಿಯೊಂದು ಮನೆಯ ಅವಿಭಾಜ್ಯ ಅಂಗವೇ ಆಗಿರುವ ಈ ಕಾಲಮಾನದಲ್ಲಿ ಅದರಿಂದ ಉಂಟಾಗಿರುವ ಲಾಭಗಳನ್ನು ಅಬಾಲವೃದ್ಧರಾದಿಯಾಗಿ ಎಲ್ಲರೂ ಅನುಭವಿಸುತ್ತಿದ್ದಾರೆ. ಆದರೆ ಅದರ ಜೊತೆಗೇ ನಾಯಿಕೊಡೆಗಳಂತೆ ಹುಟ್ಟಿಕೊಂಡ ಅಶ್ಲೀಲ ಜಾಲತಾಣಗಳ ಬಗ್ಗೆ ಈಗ ಹಾಹಾಕಾರ ಶುರುವಾಗಿದೆ. 'ಕಾಮಪ್ರಚೋದಕ ಜಾಲತಾಣಗಳನ್ನು ನಿಷೇಧಿಸಿ' ಎಂದು ಕಮಲೇಶ್ ವಾಸ್ವಾನಿ ಎಂಬ ವಕೀಲರು ಸುಪ್ರೀಂಕೋರ್ಟ್‌ಗೆ 2013ರ ಆರಂಭದಲ್ಲಿಯೇ ಅರ್ಜಿ ಸಲ್ಲಿಸಿದ್ದರು. ಅದರ ವಿಚಾರಣೆ ಇನ್ನೂ ನಡೆಯುತ್ತಿದೆ. ವಿಚಾರಣೆಯ ಒಂದು ಹಂತದಲ್ಲಿ ಸುಪ್ರೀಂಕೋರ್ಟ್ ವ್ಯಕ್ತಪಡಿಸಿದ ಅಭಿಪ್ರಾಯಗಳ, ಹಿನ್ನೆಲೆಯಲ್ಲಿ ದೂರಸಂಪರ್ಕ ಇಲಾಖೆಯು ಏಕಾಏಕಿ 857 ಕಾಮಪ್ರಚೋದಕ ಜಾಲತಾಣಗಳನ್ನು ನಿಷೇಧಿಸಲು ಅಂತರ್ಜಾಲ ಸೇವಾ ಪೂರೈಕೆದಾರರಿಗೆ ಸೂಚನೆ ನೀಡಿತು. ಆದರೆ ಮಾಧ್ಯಮಗಳಲ್ಲಿ ಅದಕ್ಕೆ ಕಾಣಿಸಿಕೊಂಡ ಉಗ್ರಪ್ರತಿರೋಧದ ಹಿನ್ನೆಲೆಯಲ್ಲಿ ಕೆಲವೇ ದಿನಗಳಲ್ಲಿ ನಿಷೇಧವನ್ನು ಹಿಂತೆಗೆದುಕೊಳ್ಳಲಾಗಿದೆ. ಸದ್ಯಕ್ಕೆ ಮಕ್ಕಳನ್ನು ಬಳಸಿಕೊಂಡು ತಯಾರಿಸುವ ಕಾಮಪ್ರಚೋದಕ ಚಿತ್ರಗಳ ವೆಬ್‌ಸೈಟ್‌ಗಳ ಮೇಲಿನ ನಿಷೇಧ ಮಾತ್ರ ಉಳಿದುಕೊಂಡಿದೆ.

ಈ ಪ್ರಕರಣ ಹಲವು ನೈತಿಕ ಮತ್ತು ತಾಂತ್ರಿಕ ಪ್ರಶ್ನೆಗಳನ್ನು ಸಾರ್ವಜನಿಕ ಚರ್ಚೆಯ ಮುನ್ನೆಲೆಗೆ ತಂದು ನಿಲ್ಲಿಸಿದೆ. ಭಾರತದಲ್ಲಿ  ಸಂವಿಧಾನದತ್ತವಾಗಿಯೇ ಪ್ರಜೆಗಳಿಗೆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನೀಡಲಾಗಿದೆ. ಪ್ರಜೆಗಳು ವೆಬ್‌ಸೈಟ್‌ನಲ್ಲಿ ಏನನ್ನು ನೋಡಬೇಕು ಅಥವಾ ನೋಡಬಾರದು ಎನ್ನುವುದನ್ನು ಸರ್ಕಾರ ನಿಯಂತ್ರಿಸಿದರೆ, ಸಂವಿಧಾನದತ್ತ ಸ್ವಾತಂತ್ರ್ಯಕ್ಕೆ ಕುತ್ತು ಬರುತ್ತದೆ ಎನ್ನುವುದು ಮುಖ್ಯ ವಾದ. 'ವಯಸ್ಕರು ತಮ್ಮ ಮನೆಯೊಳಗೆ ಕಾಮಪ್ರಚೋದಕ ವೆಬ್‌ಸೈಟ್‌ಗಳನ್ನು ವೀಕ್ಷಿಸುವುದನ್ನು ತಡೆಯಲು ಸಂವಿಧಾನದಲ್ಲಿ ಅವಕಾಶಗಳಿಲ್ಲ' ಎಂದು ಸುಪ್ರೀಂಕೋರ್ಟ್ ಕೂಡಾ ಸ್ಪಷ್ಟಪಡಿಸಿದೆ. ಆದರೆ ಕಾಮಪ್ರಚೋದಕ ತಾಣಗಳ ದುರ್ಬಳಕೆಯನ್ನು ತಡೆಯುವ ದಾರಿಗಳೇನಾದರೂ ಇದೆಯೆ ಎನ್ನುವ ಬಗ್ಗೆ ಸಲಹೆಗಳನ್ನು ನೀಡಲು ಸರ್ಕಾರವನ್ನೇ ಕೋರಿದೆ.

ನೈತಿಕತೆ ಮತ್ತು ಸಭ್ಯತೆಯ ಮಾನದಂಡಗಳನ್ನು ನಿರ್ಧರಿಸುವವರು ಯಾರು? ಜಗತ್ತಿನಲ್ಲಿ ಸುಮಾರು 4 ಕೋಟಿ ವೆಬ್‌ಸೈಟ್‌ಗಳು ಕಾರ್ಯಾಚರಿಸುತ್ತಿವೆ. ಅವುಗಳಲ್ಲಿ 857 ವೆಬ್‌ಸೈಟ್‌ಗಳನ್ನು ಮಾತ್ರ ನಿಷೇಧಿಸಲು ಅನುಸರಿಸಿರುವ ಮಾರ್ಗಸೂಚಿಗಳೇನು? ಎಲ್ಲ ವೆಬ್‌ಸೈಟ್‌ಗಳೂ ವಿದೇಶೀ ನೆಲದಿಂದ ಕಾರ್ಯಾಚರಿಸುತ್ತಿರುವಾಗ, ಅವುಗಳನ್ನು ಇಲ್ಲಿ ನಿಷೇಧಿಸುವುದು ಕಾನೂನಾತ್ಮಕವಾಗಿ ಎಷ್ಟು ಸರಿ? ಯಾವುದನ್ನು ನಿಷೇಧಿಸಿದರೂ ತಕ್ಷಣ ಇನ್ನೊಂದು ವೆಬ್‌ಸೈಟ್ ಹುಟ್ಟಿಕೊಳ್ಳುವಂತಹ ತಂತ್ರಜ್ಞಾನ ಇರುವಾಗ, ಈ ನಿಷೇಧ ಪ್ರಾಯೋಗಿಕವಾಗಿ ವಿಫಲವಾಗುವುದಿಲ್ಲವೆ?– ಹೀಗೆ ನೂರೆಂಟು ಪ್ರಶ್ನೆಗಳು ಈಗ ಹುಟ್ಟಿಕೊಂಡಿವೆ. ಅಂತರ್ಜಾಲ ಸ್ವಾತಂತ್ರ್ಯದ ಉಗ್ರ ಪ್ರತಿಪಾದಕರಂತೂ, 'ಕಾಮಪ್ರಚೋದಕ ಜಾಲತಾಣಗಳ ನಿಷೇಧದ ನೆಪದಲ್ಲಿ, ಸರ್ಕಾರಿ ನಿಯಂತ್ರಿತ ವೆಬ್‌ಫಿಲ್ಟರ್ ವ್ಯವಸ್ಥೆ ಜಾರಿಗೆ ಸರ್ಕಾರ ಸಂಚು ಹೂಡಿದೆ' ಎಂಬ ಗಂಭೀರ ಆರೋಪವನ್ನೂ ಮಾಡಿದ್ದಾರೆ.

ವಯಸ್ಕರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಲು ಸರ್ಕಾರವೊಂದು ಪ್ರಯತ್ನ ನಡೆಸಿದರೆ ಅದನ್ನು ವಿರೋಧಿಸಲೇಬೇಕು. ಆದರೆ 12–16ರ ವಯಸ್ಸಿನ ಹುಡುಗರು ಕಾಮಪ್ರಚೋದಕ ವೆಬ್‌ಸೈಟ್‌ಗಳ ಗೀಳಿಗೆ ಒಳಗಾಗಿ ವಿಕೃತರಾಗುವುದನ್ನು ತಡೆಯಲು ಯಾವ ದಾರಿಗಳಿವೆ? 'ಈ ವೆಬ್‌ಸೈಟ್‌ಗಳನ್ನು ವೀಕ್ಷಿಸಿ, ಯುವವರ್ಗ ಕ್ರಿಮಿನಲ್ ಕೃತ್ಯಗಳಿಗೆ ಇಳಿಯುತ್ತಿದೆ' ಎನ್ನಲು ಯಾವುದೇ ಆಧಾರಗಳು ಇಲ್ಲದಿರಬಹುದು. ಆದರೆ ಈ ವಯಸ್ಸಿನಲ್ಲಿ 'ಹೆಣ್ಣೆಂದರೆ ಕೇವಲ ಭೋಗವಸ್ತು' ಎಂಬ ಸ್ಥಾಯೀಭಾವ ಎಳೆಯರ ಮನಸ್ಸಿನಲ್ಲಿ ಅಚ್ಚೊತ್ತಲು ಈ ವೆಬ್‌ಸೈಟ್‌ಗಳು ಕಾರಣವಾಗುವುದನ್ನು ನಿರಾಕರಿಸಲು ಸಾಧ್ಯವೆ? ಅದರಲ್ಲೂ ಎಳೆಯ ಮಕ್ಕಳನ್ನು ಬಳಸಿಕೊಂಡ ಲೈಂಗಿಕ ವಿಕೃತಿಗಳ ಲಕ್ಷಾಂತರ ವೆಬ್‌ಚಿತ್ರಗಳು ಸಮಾಜದಲ್ಲಿ ಉಂಟು ಮಾಡುವ ಘೋರ ಪರಿಣಾಮದ ಬಗ್ಗೆ ನಮ್ಮಲ್ಲಿ ಯಾವ ಅಧ್ಯಯನ ನಡೆದಿದೆ? ಮನೆಯಲ್ಲಿರುವವರಿಗೂ  ಗೊತ್ತಾಗದಂತೆ, ಅಂಗೈಯಲ್ಲಿರುವ ಮೊಬೈಲ್‌ನಲ್ಲೇ ಎಲ್ಲವೂ ಸಿಗುವಾಗ, ಈ ಅಪ್ರಾಪ್ತ ಎಳೆಯರು ವಿಕೃತ ಮನಸ್ಥಿತಿಯನ್ನು ಬೆಳೆಸಿಕೊಳ್ಳದಂತೆ ತಡೆಯುವ ದಾರಿ ಯಾವುದು? ಸರ್ಕಾರಕ್ಕಿಂತ ಹೆಚ್ಚಾಗಿ ಸಮಾಜ ಗಂಭೀರವಾಗಿ ಚಿಂತಿಸಬೇಕಾದ ಪ್ರಶ್ನೆಗಳಿವು.

■ ಬಿ.ಎಂ.ಹನೀಫ್



ಈಶ್ವರ್